ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 5, MAR-APR 2021, 136-142
©*IIMRD*, Mysuru
www.iimrd.com

# ಭಾರತದಲ್ಲಿ ಬಿಟಿ ಹತ್ತಿ ಬೇಸಾಯ : ಸಮಸ್ಯೆಗಳು ಮತ್ತು ಸವಾಲುಗಳು

ಚಂದ್ರಶೇಖರ ಸಂಶಿ [1] ಮತ್ತು ಡಾ. ಕನ್ನಕಟ್ಟಿ ಜಯಣ್ಣ [2]

**ಪೀಠಿಕೆ**

ಹತ್ತಿಯು ಮನುಷ್ಯನಿಗೆ ಅತಿ ಅವಶ್ಯಕವಾಗಿರುವ ಒಂದು ವಸ್ತು. ಹತ್ತಿ ಮತ್ತು ಉಣ್ಣೆ ಬಟ್ಟೆಯನ್ನು ನೂಲುವುದು ಸಿಂಧೂ ಜನರ ಕಸುಬುಗಳಲ್ಲಿ ಒಂದಾಗಿತ್ತು. ಪ್ರಸ್ತುತ ಲೇಖನದಲ್ಲಿ ಬಿಟಿ ಹತ್ತಿಯನ್ನು ಭಾರತದಲ್ಲಿ ಬೆಳೆಯಲು ಮಾಡಿರುವ ವಿವಿಧ ಪ್ರಯತ್ನಗಳು ಮತ್ತು ಬಿಟಿ ಹತ್ತಿಯು ಭಾರತೀಯರಿಗೆ ಹೇಗೆ ಆದಾಯ ತರುತ್ತಿದೆ ಮತ್ತು ಹೇಗೆ ಉದ್ಯೋಗವನ್ನು ಒದಗಿಸಿದೆ ಎಂಬಿತ್ಯಾದಿ ಅಂಶಗಳನ್ನು ಚರ್ಚಿಸಿರುವುದರ ಜೊತೆಗೆ ಬಿಟಿ ಹತ್ತಿ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸಮಸ್ಯೆಗಳಿಗೆ ಪರಿಹಾರವನ್ನು ಕುರಿತು ವಿಮರ್ಶಿಸಲಾಗಿದೆ.

**ಬಿಟಿ ಹತ್ತಿಯ ಇತಿಹಾಸ**

ಹತ್ತಿಯನ್ನು ತಳಿಗಳ ಆಧಾರದ ಮೇಲೆ ನಾಲ್ಕು ಭಾಗಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ ಗೋಸಿಫಿಯಮ್ ಹೀರೊಸುಟಂ (ಅಮೆರಿಕನ್ ಹತ್ತಿ), ಜಿ. ಬಾರಬೇಡನ್ಸ್ (ಇಜೀಪ್ಟಿಯನ್ ಹತ್ತಿ), ಜಿ.ಅರ್ಭೊರಿಯಮ್ (ಏಸಿಯನ್ ಹತ್ತಿ) ಮತ್ತು ಜಿ.ಹರ್ಬಾಸಿಯಮ್ (ಲೆವೆಂಟ ಹತ್ತಿ). 18ನೇ ಶತಮಾನದ ಮಧ್ಯದವರೆಗೆ ಸ್ಥಳೀಯ ಹತ್ತಿ ತಳಿಗಳಾದ ಜಿ.ಅರ್ಭೊರಿಯಮ್ (ಏಸಿಯನ್ ಹತ್ತಿ) ಮತ್ತು ಜಿ.ಹರ್ಬಾಸಿಯಮ್ (ಲೆವೆಂಟ ಹತ್ತಿ) ಈ ಎರಡು ತಳಿಗಳನ್ನು ಭಾರತದಲ್ಲಿ ಬೆಳೆಯಲಾಗುತ್ತಿತ್ತು. ಇವುಗಳು ಸಣ್ಣ ಎಳೆಯ ಹತ್ತಿಗಳಾಗಿದ್ದವು, ನೇಕಾರರು ಇದ್ದರಿಂದ ಒಳ್ಳಯ ಹತ್ತಿ ಬಟ್ಟೆಗಳನ್ನು ತಯಾರಿಸುತ್ತಿದ್ದರು. ಆದರೆ ಭಾರತದಲ್ಲಿ ಬೆಳೆಯಲಾಗುತ್ತಿದ್ದ ಹತ್ತಿಯು ಸಣ್ಣ ಎಳೆ ಮತ್ತು ಒರಟಾಗಿದ್ದು ಇವುಗಳು ಲೆಂಕಾಶಿರ್ ಮತ್ತು ಮೆಂಚೆಸ್ಟರ್ ಮಿಲ್‌ಗಳಲ್ಲಿ ಸರಿ ಹೊಂದುತ್ತಿರಲ್ಲಿಲ್ಲ. ಹಾಗಾಗಿ 1790 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ದೇಶೀಯ ಹತ್ತಿಯ ಬದಲಾಗಿ ಉದ್ದನೆಯ ಮತ್ತು ಮಧ್ಯಮ ಎಳೆಯ ಅಮೇರಿಕನ್

---

[1] *ಸಂಶೋಧನಾ ವಿದ್ಯಾರ್ಥಿ (ವಾಣಿಜ್ಯಶಾಸ್ತ್ರ), ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಸಹಾಯಕ ಪ್ರಾಧ್ಯಾಪಕರು, ಕೆ. ಎಸ್.ಎಸ್ ಮಹಾವಿದ್ಯಾಲಯ, ಗದಗ*

[2] *ಸಂಶೋಧನಾ ಮಾರ್ಗದರ್ಶಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಸಹ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.*

ಹತ್ತಿಯನ್ನು ಬೆಳೆಯಲು ಪ್ರಾರಂಭಿಸಿತು. ಹೀಗೆ ಉತ್ಪಾದಿಸಿದ ಹತ್ತಿಯನ್ನು ಇಂಗ್ಲೆಂಡಿನ ಕೈಗಾರಿಕೆಗಳಿಗೆ ಒದಗಿಸುವುದು ಪ್ರಮುಖ ಉದ್ದೇಶವಾಗಿತ್ತು. ಭಾರತದ ಪರ್ಯಾಯ ದ್ವೀಪ ಪ್ರದೇಶದಲ್ಲಿ ಅಮೇರಿಕನ್ ಹತ್ತಿಯ ಬೀಜಗಳಾದ ಮೌರಿಟಿಯ್ಸ್ ಮತ್ತು ಭ್ರೌಬಾನ್ ಕಾಟನ್ ಅಮೇರಿಕನ್ ಬೀಜಗಳನ್ನು ಹಂಚಲು ಅಂಡ್ರಸನರನ್ನು ನಿಯೋಜನೆ ಮಾಡಲಾಗಿತ್ತು. 1793 ರಲ್ಲಿ ಡಾ. ಮಿಲಿಯಮ್ ಬೊಕ್ಸಬ್ರಗ್‌ರವರು ಕೋರಮಂಡಲ್‌ನಂತಹ ಕಡಿಮೆ ಫಲವತ್ತತೆ ಹಾಗೂ ಒಣ ಭೂಮಿ/ಮಣ್ಣಿನಲ್ಲಿ ಆಮೇರಿಕನ್ ಹತ್ತಿಯನ್ನು ಬೆಳೆಯಬಹುದು ಎಂದು ಹೇಳಿದರು. ನಂತರ 1818 ರಲ್ಲಿ ಅಮೇರಿಕನ್ ಹತ್ತಿಯನ್ನು ತಿರುನಲ್ವೇಲಿ, ಕೊಯಮತ್ತೂರು, ಮಚಲ್ಲಿಪಟ್ಟಣ ಮತ್ತು ವಿಶಾಖಪಟ್ಟಣಂ ಬೆಳೆದು ಪರೀಕ್ಷಿಸಲಾಯಿತು.

1993 ರಲ್ಲಿ ಪ್ರಥಮ ಬಾರಿಗೆ ಅಮೆರಿಕಾ, 1997ರಲ್ಲಿ ಚೀನಾ ನಂತರ ಭಾರತದಲ್ಲಿ 2002ರಲ್ಲಿ ಬಿಟಿ ಹತ್ತಿಯನ್ನು ಬೆಳೆಯಲು ಪ್ರಾರಂಭಿಸಲಾಯಿತು. ಪ್ರಸ್ತುತ ಭಾರತವು ಹತ್ತಿ ಬೆಳೆಯುವುದರಲ್ಲಿ ಪ್ರಥಮ ಸ್ಥಾನವನ್ನು ಹೊಂದಿದ್ದರೆ, ಆಮೇರಿಕಾ ಎರಡನೆಯ ಸ್ಥಾನವನ್ನೂ, ಮತ್ತು ಚೀನಾವು ಮೂರುನೇ ಸ್ಥಾನವನ್ನು, ಪಾಕಿಸ್ತಾನ ನಾಲ್ಕನೇ ಸ್ಥಾವನನ್ನು ಹೊಂದಿದೆ. ಪ್ರಪಂಚದ ಹತ್ತಿ ಉತ್ಪಾದನೆ ಮತ್ತು ರಪ್ತಿನಲ್ಲಿ ಭಾರತವು ಪ್ರಸಿದ್ಧವಾದ ಪಾತ್ರವನ್ನು ವಹಿಸುತ್ತಿದೆ. ಆಮೇಕಾದಲ್ಲಿ ಹತ್ತಿ ಪ್ರಮುಖ ಆರ್ಥಿಕ ಬೆಳೆಯಾಗಿದ್ದು, ವಾರ್ಷಿಕ ವ್ಯವಹಾರದಿಂದ 120 ಬಿಲಿಯನ್ ಡಾಲರ್ ಗಳಿಸುತ್ತದೆ.

**ಮೊನ್ಸಂಟೋ ಮತ್ತು ಭಾರತೀಯ ಬೀಜ ಕಂಪನಿಗಳ ನಡುವಿನ ಹೋರಾಟ**

ಬಿಟಿ ಹತ್ತಿ ಬೀಜಗಳಿಗೆ ಭಾರತದಲ್ಲಿ ಪೇಟೆಂಟ್ ನೀಡಬಹುದೇ ಎಂಬ ವಿಷಯದ ಬಗ್ಗೆ ಜಾಗತಿಕ ಬೀಜ ದೈತ್ಯ ಮೊನ್ಸಂಟೋ ಮತ್ತು ಭಾರತೀಯ ಬೀಜ ಕಂಪನಿಗಳ ನಡುವಿನ ಹೋರಾಟದಲ್ಲಿ ದೆಹಲಿ ಹೈ ಕೋರ್ಟ್ ಏಪ್ರೀಲ್ 11, 2018 ರಂದು ಮೊನ್ಸಾಂಟೂ ಕಂಪನಿ ವಿರುದ್ಧ ತೀರ್ಪು ನೀಡಿತ್ತು, ಭಾರತೀಯ ಕಾನೂನಿನ ಪ್ರಕಾರ ಸಸ್ಯಗಳಿಗೆ ಪೇಟೆಂಟ್ ಪಡೆಯಲು ಸಾಧ್ಯವಿಲ್ಲದ ಕಾರಣ ಬಿಟಿ ಹತ್ತಿ ಬೀಜಗಳಿಗೆ ಪೇಟೆಂಟ್ ಪಡೆಯಲು ಸಾಧ್ಯವಿಲ್ಲ ಎಂದು ಹೇಳಿದೆ. ಮೊನ್ಸಾಂಟೋ ನಂತರ ಉನ್ನತ ನ್ಯಾಯಾಲಯಕ್ಕೆ ತೆರಳಿದರು, ಇದು ಜುಲೈ 2018 ರಲ್ಲಿ ಮಧ್ಯಂತರ ತೀರ್ಪಿನಲ್ಲಿ ಹೈ ಕೋರ್ಟ್ ಆದೇಶವನ್ನು ತಡೆಯಲು ನಿರಾಕರಿಸಿತು. ಸಸ್ಯ ಪ್ರಭೇದಗಳು ಮತ್ತು ಬೀಜಗಳನ್ನು ಭಾರತದಲ್ಲಿ ಪೇಟೆಂಟ್ ಮಾಡಲು ಸಾಧ್ಯವಿಲ್ಲ ಎಂದು ತೀರ್ಪು ನೀಡಲು ಹೈಕೋರ್ಟ್ 1970 ರ ಪೇಟಂಟ್ ಕಾಯ್ದೆಯನ್ನು ಉಲ್ಲೇಖಿಸಿತ್ತು. ಪರವಾನಗಿ ಪಡೆದ ನುಜೀಡು ಸೀಡ್ಸ್ ಲಿಮಿಟೆಡ್ ಬೀಜಗಳಿಗೆ ರಾಯಲ್ಟಿ ಅಥವಾ ಗುಣಲಕ್ಷಣ ಮೌಲ್ಯವನ್ನು ಪಾವತಿಸದೆ ಭಾರತದಲ್ಲಿ ಬೀಜಗಳನ್ನು ಮಾರಾಟ ಮಾಡುವುದನ್ನು ತಡೆಯಲು ಮೊನ್ಸಾಂಟೋ ಕಾನೂನು ನೆರವು ತೆಗೆದುಕೊಳ್ಳುವುದನ್ನು ಇದು ಪರಿಣಾಮಕಾರಿಯಾಗಿ ತಡೆಯಿತು. ನ್ಯಾಯಾಲಯದಲ್ಲಿ

ಮೊನ್ಸಾಂಟೊ ಆರೋಪವನ್ನು ಹಿರಿಯ ವಕೀಲರಾದ ಅಭಿಷೇಕ ಮನು ಸಿಂಗ್ವಿ ಮತ್ತು ನೀರಜ್ ಕಿಶನ್ ಕೌಲ್ ವಹಿಸಿದ್ದಾರೆ.

**ಭಾರತದಲ್ಲಿ ಹತ್ತಿ ಉತ್ಪಾದನೆ ಮತ್ತು ಹತ್ತಿ ಕೈಗಾರಿಕೆಯ ಪ್ರಸ್ತುತ ಸ್ಥಿತಿಗತಿಗಳು**

ಹತ್ತಿಯು ಭಾರತದ ಟೈಕ್ಸ್‌ಟೈಲ್‌ನ ಬೆನ್ನೆಲುಬಾಗಿದ್ದು ಭಾರತದ ಆರ್ಥಿಕಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ದೇಶದಲ್ಲಿ ಹತ್ತಿಯನ್ನು ಸುಮಾರು 10.5 ಮಿಲಿಯನ್ ಹೆಕ್ಟೇರ್‌ಗಳಲ್ಲಿ ಬೇಸಾಯ ಮಾಡಲಾಗಿದ್ದು, ಇದು ಜಾಗತಿಕ ಹತ್ತಿ ಪ್ರದೇಶದ ಶೇಕಡಾ 43ರಷ್ಟು ಆಗಿದ್ದು. ಜಾಗತಿಕ ಹತ್ತಿಗೆ ಶೇಕಡಾ 25 ರಷ್ಟು ಹತ್ತಿಯನ್ನು ಒದಗಿಸುತ್ತದೆ. ಸರಿಸುಮಾರು 60 ಮಿಲಿಯನ್ ಜನರು ಹತ್ತಿ ಕೈಗಾರಿಕೆಯಲ್ಲಿ ಪರೋಕ್ಷವಾಗಿ ಮತ್ತು ಪ್ರತ್ಯೇಕ್ಷವಾಗಿ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಭಾರತವು ಒಟ್ಟು ಸಾಗುವಳಿ ಭೂಮಿಯಲ್ಲಿ ಅತಿ ಹೆಚ್ಚು ಪ್ರದೇಶ ಅಂದರೆ ಶೇಕಡಾ 37 ರಷ್ಟು ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯುತ್ತಿದೆ. ಭಾರತದಲ್ಲಿ ಹತ್ತಿಯನ್ನು ಬೆಳೆಯುವ ಪ್ರಮುಖ ರಾಜ್ಯಗಳನ್ನು ಮೂರು ವಿಭಾಗಗಳಾಗಿ ವಿಭಾಗಿಸಲಾಗಿದೆ. ಅವು ಉತ್ತರ ವಲಯ, ಕೇಂದ್ರ ವಲಯ ಮತ್ತು ದಕ್ಷಿಣ ವಲಯ, ವಿವಿಧ ವಲಯಗಳೂ ಭೌಗೋಳಿಕವಾಗಿ ವಿವಿಧ ವಿಧಗಳ ಹತ್ತಿಯನ್ನು ಬೇರೆ ಬೇರೆ ಇಳುವರಿಯನ್ನು ಕೊಡುತ್ತಿವೆ. ಇದರಲ್ಲಿ ಸರಿಸುಮಾರು ಶೇಕಡಾ 57 ರಷ್ಟು ಹತ್ತಿಯ ಉತ್ಪಾದನೆಯು ಕೇಂದ್ರ ವಲಯದಿಂದ ಬರುತ್ತಿದೆ. ಗುಜರಾತವು ಶೇಕಡಾ 28 ರಷ್ಟು ಉತ್ಪಾದಿಸುವದರ ಮೂಲಕ ಅತಿ ಹೆಚ್ಚು ಹತ್ತಿ ಉತ್ಪಾದಿಸುವ ರಾಜ್ಯವಾಗಿದೆ. ನಂತರ ಮಹಾರಾಷ್ಟ್ರ ರಾಜ್ಯವು ಶೇಕಡಾ 23 ರಷ್ಟು ಉತ್ಪಾದಿಸುತ್ತಿದೆ.

**ಭಾರತದಲ್ಲಿ ಹತ್ತಿ ಉತ್ಪಾದಕರು ಎದುರಿಸುತ್ತಿರುವ ಸಮಸ್ಯೆಗಳು**

ಹತ್ತಿ ಬೆಳೆಗಾರರು ಒಂದಡೆ ದರ ಕುಸಿತದಿಂದ ಸಂಕಷ್ಟಕ್ಕಿಡಾಗಿದ್ದರೆ ಇನ್ನೊಂದೆಡೆ ಬೆಂಬಲ ಬೆಲೆ ಯೋಜನೆಯಡಿ ಭಾರತೀಯ ಹತ್ತಿ ನಿಗಮದವರು (ಸಿಸಿಐ) ಹತ್ತಾರು ನೆಪ ಹೇಳಿ ಸರಿಯಾಗಿ ಖರೀದಿ ಮಾಡದೆ ಮತ್ತಷ್ಟು ತೊಂದರೆಗೆ ಸಿಲುಕಿಸುತ್ತಿದ್ದಾರೆ. ತಾರಿಹಾಳ ಕೈಗಾರಿಕಾ ಪ್ರದೇಶದಲ್ಲಿರುವ ಖರೀದಿ ಕೇಂದ್ರಕ್ಕೆ ಹತ್ತಿ ತೆಗೆದುಕೊಂಡು ಬರುವ ರೈತರ ಬಹುತೇಕ ಹತ್ತಿಯನ್ನು ಅಧಿಕಾರಿಗಳು ಗುಣಮಟ್ಟದ ನೆಪ ಹೇಳಿ ತಿರಸ್ಕರಿಸುತ್ತಿದ್ದಾರೆ. ಇದರಿಂದ ಬಂದ ದಾರಿಗೆ ಮತ್ತೊಮ್ಮೆ ಸುಂಕ ಕೊಟ್ಟು ವಾಪಸ್ ಹೋಗಬೇಕು, ಇಲ್ಲವೇ ಅಲ್ಲೇ ಹತ್ತಿರದ ಜಿನ್ನಿಂಗ್ ಮಿಲ್‌ಗಳಿಗೆ ಕೈಗೆ ಬಂದ ದರಕ್ಕೆ ಮಾರಾಟ ಮಾಡುಬೇಕಾದದ್ದು ರೈತರಿಗೆ ಅನಿವಾರ್ಯವಾಗಿದೆ. ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಲ್ ಉತ್ತಮ ದರ್ಜೆ ಹತ್ತಿಯನ್ನು ರೂ. 5,355 ರೂಪಾಯಿಗಳಿಗೆ ಖರೀದಿ ಮಾಡುತ್ತಿದ್ದಾರೆ. ಹತ್ತಿಯನ್ನು ತಿರಸ್ಕರಿಸುವುದ್ದರಿಂದ ಅದೇ ಹತ್ತಿಯನ್ನು ಹತ್ತಿರದ ಜಿನ್‌ಗಳಿಗೆ ರೂ. 3000 ಬೆಲೆಗೆ ಮಾರಾಟ ಮಾಡಿ ರೈತರು ಕೈಸುಟ್ಟುಕೊಳ್ಳುವ ಪ್ರಸಂಗ ಬರುತ್ತಿದೆ.

ಅಣ್ಣಿಗೇರಿ ಎಪಿಎಂಸಿ ಹಾಗೂ ಖರೀದಿ ಕೇಂದ್ರದ ಅಧಿಕಾರಿಗಳು ಹೆಸರು ನೋಂದಣಿ ಮಾಡಿಕೊಂಡ ರೈತರ ಮನೆಗೆ ಹೋಗಿ, ಪರಿಶೀಲನೆ ಮಾಡುತ್ತಿದ್ದಾರೆ. ಇದರಿಂದ ಹತ್ತಿ ಬೆಳೆದಿರುವ ರೈತರು ಯಾರೆಂಬುದು ಖಚಿತವಾಗುತ್ತದೆ. ಜತೆಗೆ ಹತ್ತಿಯ ಗುಣಮಟ್ಟ ತಿಳಿಯುವುದರಿಂದ ಅಲ್ಲೇ ಅದನ್ನು ಖರೀದಿಸಬೇಕೋ ಅಥವಾ ತಿರಸ್ಕರಿಸಬೇಕೋ ಎಂಬುದು ನಿರ್ಧಾರವಾಗುತ್ತದೆ. ಈ ವಿಧಾನ ಅಣ್ಣಿಗೇರಿಯಲ್ಲಿ ಮಾಡಲಾಗುತ್ತಿದೆ. ಹುಬ್ಬಳ್ಳಿಯಲ್ಲಿ ಏಕೆ ಇಲ್ಲ ಎಂಬುದು ರೈತರ ಪ್ರಶ್ನೆ, ಸಿಸಿಐ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ರೈತರು ನಷ್ಟ ಅನುಭವಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಸಿಸಿಐ ಆಡಳಿತವು ಎಲ್ಲಾ ಹತ್ತಿ ಬೆಳೆಗಾರರಿಗೆ ಆಯಾ ಎಪಿಎಂಸಿಗಳ ಸಲಹೆಯಂತೆ ಹಂತ ಹಂತವಾಗಿ ತಮ್ಮ ಬೆಳೆ ತರಬೇಕೆಂದು ಮನವಿ ಮಾಡಿದೆ. ಕೇಂದ್ರವು 2020–21ರ ಸೀಸನ್‌ದ ಕನಿಷ್ಟ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಪ್ರತಿ ಕ್ವಿಂಟಲ್‌ಗೆ ರೂ.5,825 ರಂತೆ ನಿಗದಿಪಡಿಸಿದೆ. ಸಿಸಿಐ ನಿಗದಿಪಡಿಸಿದ ದೈನಂದಿನ ಮಿತಿಯಿಂದಾಗಿ ಗುಜರಾತ್, ಪಂಜಾಬ್ ಮತ್ತು ಇತರ ಭಾಗಗಳನ್ನು ಒಳಗೊಂಡಂತೆ ಹತ್ತಿ ಬೆಳೆಯುವ ಪ್ರದೇಶಗಳಲ್ಲಿನ ರೈತರು ತಮ್ಮ ಬೆಳೆಗಳನ್ನು ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಲು ತೊಂದರೆ ಅನುಭವಿಸಿದ ನಂತರ ಅಹತ್ತಿ ಬೆಳೆಯುವ ರಾಜ್ಯಗಳ 140 ಜಿಲ್ಲೆಗಳಲ್ಲಿ 440 ಎಂಎಸ್‌ಪಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಸಿಸಿಐ ತಿಳಿಸಿದೆ.

**ಕಡಿಮೆ ಇಳುವರಿ**

ಭಾರತದ ಹತ್ತಿ ಇಳುವರಿ ಬೇರೆ ದೇಶಗಳ ಇಳುವರಿಗೆ ಹೋಲಿಸಿದರೆ ತುಂಬಾ ಕಡಿಮೆ ಇದೆ. ಪ್ರತಿಯೊಂದು ದೇಶವು ಈ ವಿಷಯದಲ್ಲಿ ನಮ್ಮಗಿಂತ ಮುಂದೆ ಇವೆ. ರೈತರ ಆದಾಯದ ಮೇಲೆ ಪ್ರಭಾವ ಬೀರಿದೆ. ಇಳುವರಿ ಕಡಿಮೆಯಾಗಿರಲು ಕಾರಣ ಇತ್ತೀಚಿನ ಹಳದಿ ಕೀಟ (ಪಿಂಕ್ ಬೋಲ್ವರ್ಮ್)ಗಳ ಅತಿಯಾದ ಕಾಟದಿಂದ ಎಂದು ಹೇಳಲಾಗಿದೆ. ಇನ್ನೊಂದು ಕಾರಣ ಹತ್ತಿಯನ್ನು ಮ್ಯಾನುವಲ್ ಆಗಿ ತೆಗೆಯುವುದಾಗಿದೆ. ಇದು ಚನ್ನಾಗಿರುತ್ತದೆ ಆದರೆ ತುಂಬಾ ಉತ್ಪಾದನೆಯನ್ನು ಹಾಳು ಮಾಡುತ್ತದೆ.

**ಬೆಲೆ ಚಂಚಲತೆ**

ಹತ್ತಿಯು ಅನುಕೂಲಕರವಾದ ಹವಾಗುಣ ಮೇಲೆ ಪ್ರಭಾವ ಬೀರುತ್ತದೆ. ತ್ವರಿತ ಹವಾಗುಣ ಬದಲಾವಣೆಯಿಂದ ಹತ್ತಿಯ ಬೆಲೆಗಳಲ್ಲಿ ಬದಲಾವಣೆಯನ್ನು ಕಾಣಬಹುದು.

**ಕನಿಷ್ಠ ಬೆಂಬಲ ಬೆಲೆ**

ಭಾರತ ಸರ್ಕಾರವು ರೈತರನ್ನು ಕಾಪಾಡಲು ಕನಿಷ್ಠ ಬೆಂಬಲ ಬೆಲೆಯನ್ನು ಪ್ರತಿ ವರ್ಷ ಅಕ್ಟೋಬರ್‌ನಿಂದ ಸಪ್ಟಂಬರ್‌ದ ಒಳಗೆ ನಿರ್ಧಾರ ಮಾಡುತ್ತದೆ. ಕನಿಷ್ಠ ಬೆಂಬಲ ಬೆಲೆಯನ್ನು

ಕಮೀಷನರ್ ಪೋರ್ ಅಗ್ರಿಕಲ್ಚರ್ ಕಾಸ್ಟ್ ಆಂಡ್ ಪ್ರ್ಯಾಜ್ಸ್, ಉತ್ಪಾದನೆ ವೆಚ್ಚ, ಬೇಡಿಕೆ–ಪೂರೈಕೆ ಸನ್ನಿವೇಶ, ಜಾಗತಿಕ ಮತ್ತು ಸ್ಥಳೀಯ ಬೆಲೆಗಳು ಮುಂತಾದವುಗಳ ಆಧಾರದ ಮೇಲೆ ನಿರ್ಣಯ ಮಾಡುತ್ತದೆ.

**ಹೈ ಲೆವೆಲ್ ಆಫ್ ಕಂಟೇಮಿನೇಷನ್**

ಭಾರತದ ಹತ್ತಿಯ ಅಳ್ಳಿಯು ತುಂಬಾ ಚನ್ನಾಗಿದ್ದರು ಸಹ ಹತ್ತಿಯ ಕಲುಷಿತತೆ (ಕಂಟೇಮಿನೇಷನ್) ತನ್ನತೆಯನ್ನು ಕಳೆದುಕೊಂಡಿದೆ. ಇಂಟರ್‌ನ್ಯಾಷನಲ್ ಟೆಕ್ಸ್‌ಟೈಲ್ಸ್ ಮ್ಯಾನುಫ್ಯಾಕ್ಚರ್ಸ್ ಫೆಡರೇಶನ್‌ರವರ ಸಂಶೋಧನೆಯ ಪ್ರಕಾರ ಜಗತ್ತಿನಲ್ಲಿ ಭಾರತದ ಹತ್ತಿಯು ಕಲುಷಿತವಾದ ಹತ್ತಿಯನ್ನು ಅತಿ ಹೆಚ್ಚು ಬೆಳೆಯುತ್ತಿದೆ. ಭಾರತದಲ್ಲಿ ಹತ್ತಿಯ ಎಳೆಗಳನ್ನು ಕೈಯಿಂದ ಬಿಡಿಸುವುದು ಕಂಡುಬರುತ್ತದೆ. ಈ ಕಲುಷಿತತೆಯಿಂದ, ಹತ್ತಿಯ ಬೀಜ ಸಂಗ್ರಹಣೆಯಿಂದ ಹಿಡಿದು ಅದರ ಜೀನ್ನಿಂಗ್ ಮತ್ತು ಪ್ರೇಸ್ಸಿಂಗ್‌ವರೆಗೆ ಮುಂದುವರೆದಿರುತ್ತದೆ.

**ಲಾಕ್ ಡೌನ್ ಇಂಪ್ಯಾಕ್ಟ್**

ಭಾರತದಲ್ಲಿ ಹತ್ತಿ ವ್ಯಾಪಾರವು ಕರೋನಾ ಹೊಡೆತದಿಂದಾಗಿ ಮತ್ತು ಲಾಕ್‌ಡೌನ್‌ನಿಂದಾಗಿ ದೊಡ್ಡ ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸಲಾಗಿದೆ. ಪ್ರಸ್ತುತ ವರ್ಷದಲ್ಲಿ ಇದರಿಂದಾಗಿ 25–30 ಲಕ್ಷ ಬೇಲ್‌ನಷ್ಟು ಹತ್ತಿ ಉಪಯೋಗ ನಿಂತು ಹೋಗಿದೆ ಎಂದು ಒಳಗಿನವರಿಗೆ ಅಂದರೆ ಜೀನ್ನಿಂಗ್ ಮತ್ತು ಪ್ರೇಸಿಂಗ್ ಕೈಗಾರಿಕೆ ಅತಿ ಹೆಚ್ಚಾಗಿ ಸಂಬಂಧಿಸಿದೆ. ಇದು ಹಣಕಾಸಿನ ತೊಂದರೆಯನ್ನು ಅನುಭವಿಸುತ್ತಿದೆ. ಕಾಟನ್ ಅಸೋಷಿಯಸ್ ಆಫ್ ಇಂಡಿಯಾವು ಜೀನ್ನಿಂಗ್ ಮತ್ತು ಪ್ರೇಸ್ಸಿಂಗ್ ಕೈಗಾರಿಕೆಗಳಿಗೆ ಸಹಾಯವನ್ನು ಮತ್ತು ಸಹಕಾರವನ್ನು ನೀಡಲು ಪ್ರಧಾನಮಂತ್ರಿ ಮತ್ತು ಟೆಕ್ಸ್‌ಟೈಲ್ ಮೀನಿಸ್ಟರ್ ಸಹಾಯ ಬೇಕು.

**ಅನುಭೋಗದಲ್ಲಿ ಕಡಿಮೆ**

ಕಾಟನ್ ಅಸೋಷಿಯ್ಸನ್ ಆಫ್ ಇಂಡಿಯಾವು ಲಾಕಡೌನ್‌ನಿಂದಾಗಿ 25–30 ಲಕ್ಷ ಬೇಲ್ ಹತ್ತಿ ಉಪಯೋಗ ಅಥವಾ ಅನುಭೋಗ ಕಡಿಮೆಯಾಗಿದೆ. ಹತ್ತಿ ಪ್ರೇಸ್ಸಿಂಗ್ ಚಟುವಟಿಕೆಗಳಿಗೆ ತುಂಬಾ ಹೊಡೆತ ಬಿದ್ದಿದೆ. ಹಾಗಾಗಿ ಹತ್ತಿಯನ್ನು ಪ್ರಸ್ತುತ ದರದಲ್ಲಿ ಹತ್ತಿ ಬೆಳೆಗಾರರು ಮಾರಾಟ ಮಾಡಲು ತಯಾರಾಗಿರುವುದಿಲ್ಲ. ಮಿಲ್‌ಗಳಿಂದ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಂದ ಒಟ್ಟು 331 ಲಕ್ಷ ಬೇಲ್ ಹತ್ತಿ ಅನುಭೋಗಕ್ಕೆ ಅವಶ್ಯಕವಿರುತ್ತದೆ ಎಂದು ಕಾಟನ್ ಅಸೋಷಿಯಸ್ ಆಫ್ ಇಂಡಿಯ್ ಲೆಕ್ಕ ಮಾಡಿರುತ್ತದೆ. ಇದರಲ್ಲಿ 288 ಲಕ್ಷ ಬೇಲ್ ಕೂಡಾ ಒಳಗೊಂಡಿರುತ್ತದೆ. ಬೆಲೆಯು ಅನುಭೋಗದ ಮೇಲೆ ಪ್ರಭಾವ ಬೀರುತ್ತದೆ. ಮಾರುಕಟ್ಟೆಯ ದೃಷ್ಟಿಯಿಂದ ಘನತಾ ಹೇಳುವುದೆನೆಂದರೆ ಲಾಕ ಡೌನನಿಂದಾಗಿ ಹತ್ತಿಯ ದರದಲ್ಲಿ ಶೇ 10 ರಷ್ಟು ಬೆಲೆ ಕಡಿಮೆಯಾಗಿದೆ.

ಅಂದರೆ 356 ಕೀ.ಗ್ರಾಂ ಗೆ ರೂ.40,000 ಇದ್ದದು, ಕೇವಲ ರೂ.36,500 ಆಗಿರುತ್ತದೆ. ಮತ್ತೊಂದು ಕಡೆ ಅಂತರಾಷ್ಟ್ರೀಯ ಕಾಟನ್ ದರಗಳು, ಪ್ರತಿ ಪೌಂಡ್ ಎಫ್‌ಒಬಿ ಪೋರ್ಟ್ ವಿತರಣೆಗೆ 65 ಯು ಎಸ್ ಸೆಂಟಗಳಷ್ಟು ಸುಳಿದಾಡುತ್ತಿವೆ, ಇದು 39,000–40,000 ಎಸ್‌ಒಬಿ ಭಾರತೀಯ ವೆಚ್ಚಗಳಿಗೆ ಅನುಗುಣವಾಗಿರುತ್ತದೆ.

**ಪರಿಹಾರಗಳು/ಶಿಫಾರಸ್ಸುಗಳು**

- ಕೀಟ ನಾಶಪಡಿಸುವ ಒಳ್ಳೆಯ ಹತ್ತಿ ಬೀಜಗಳನ್ನು ಉತ್ಪಾದಿಸುವುದು.
- ಕೈಗಾರಿಕೆಯು ರೈತರಿಗೆ ಒಳ್ಳೆಯ ಗುಣಮಟ್ಟ ಬೀಜಗಳನ್ನು ವಿತರಣೆಮಾಡುವ ಅವಶ್ಯಕತೆ ಇದೆ.
- ಬೆಳೆಯ ನಿರ್ವಹಣೆ ಪ್ರಾಯೋಗಿಕವಾಗಿ ಮಾಡುವುದು ಮತ್ತು ಉದ್ಧೇಶ ಪೂರ್ವಕವಾಗಿ ಯೋಜನೆ ಹಮ್ಮಿಕೊಳ್ಳುಬೇಕಾಗಿದೆ.
- ಬೆಲೆಯ ಚಂಚಲತೆಯಿಂದ ತಡೆಗಟ್ಟಲು ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾ(ಸರ್ಕಾರ)ವು ಹತ್ತಿಯ ದಾಸ್ತಾನು ಮಾಡಬೇಕು.
- ಭಾರತದ ಮಧ್ಯವರ್ತಿಗಳನ್ನು, ಮೀಲ್‌ಗಳನ್ನು, ವ್ಯಾಪಾರಸ್ಥರನ್ನು ಮತ್ತು ಜೀನ್ನರನ್ನು ಉಳಿಸಲು, ಅಂತರಾಷ್ಟ್ರೀಯ ಹತ್ತಿ ಒಪ್ಪಂದಗಳನ್ನು ಪ್ರಾರಂಭಿಸಬೇಕು.
- ರೈತರಿಗೆ ನೇರವಾಗಿ ಲಾಭವನ್ನು ಒದಗಿಸುವುದರ ಬದಲು ಭತ್ತೆ (ಸಬ್ಸಡಿ)ಗಳನ್ನು ನೇರವಾಗಿ ನೀಡಬೇಕು. ಈ ಪ್ರಕ್ರಿಯಯಲ್ಲಿ ರೈತರು ತಮ್ಮ ಕನಿಷ್ಠ ಬೆಂಬಲ ಬೆಲೆ ಮತ್ತು ಹತ್ತಿಯ ಬೀಜಗಳ ಮಾರುಕಟ್ಟೆ ಬೆಲೆಯ ವ್ಯತ್ಯಾಸವನ್ನು ನೇರವಾಗಿ ತಮ್ಮ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ. ಉದಾ: ಒಂದು ಕ್ವಿಂಟಲ್ ಹತ್ತಿಯ ಕನಿಷ್ಠ ಬೆಂಬಲ ಬೆಲೆಯು 4000 ಇದ್ದು, ಹತ್ತಿ ಬೀಜದ ಮಾರುಕಟ್ಟೆಯ ಬೆಲೆಯು ಪ್ರತಿ ಕ್ವಿಂಟಲ್‌ಗೆ ರೂ.3500 ಇದ್ದರೆ, ರೂ.500 ಗಳನ್ನು ರೈತರಿಗೆ ಸಬ್ಸಡಿಯಾಗಿ ನೀಡಬೇಕು. ಇದರಿಂದ ರೈತರು ತಮ್ಮ ಹತ್ತಿಯನ್ನು ಕಡಿಮೆ ಬೆಲೆಗೆ ಸಿಸಿಐಗೆ ಮಾರುವುದು ತಪ್ಪುತ್ತದೆ.

**ಉಪಸಂಹಾರ**

ಪ್ರಸ್ತುತ ಭಾರತದಲ್ಲಿ ಪಂಜಾಬ್, ಹರಿಯಾಣ, ರಾಜಸ್ಥಾನ, ಹಿಮಾಚಲ ಪ್ರದೇಶ ಮತ್ತು ಮಹಾರಾಷ್ಟ್ರ ಸೇರಿದಂತೆ ಸರಿಸುಮಾರು ಶೇ.50 ರಷ್ಟು ಮಿಲ್‌ಗಳು ಕಾರ್ಯ ಪ್ರಾರಂಭಿಸಿವೆ. ಇದರ ಜೊತೆ ತಮಿಳುನಾಡಿನ ಹಸಿರು ವಲಯದಲ್ಲಿ ಕೆಲವು ಮಿಲ್‌ಗಳು ಕಾರ್ಯ ಮಾಡುತ್ತಿವೆ.

## ಪರಾರ್ಮಶನ ಗ್ರಂಥಗಳು


- ಕಾಟನ್ ಸ್ಟೆಟಿಸ್ಟಿಕ್ಸ್ ಮತ್ತು ನ್ಯೂಸ್. (ಪೆಬ್ರುವರಿ 25, 2020). ಹಿಸ್ಟರಿ ಆಫ್ ಬಿಟಿ ಕಾಟನ್. ಕಾಟನ್ ಅಸೋಸಿಯಷನ್ ಆಫ್ ಇಂಡಿಯಾ, ನಂ.48.
- ಕಾಟನ್ ಸ್ಟೆಟಿಸ್ಟಿಕ್ಸ್ ಮತ್ತು ನ್ಯೂಸ್. (ಮಾರ್ಚ 17, 2020). ಭಾರತದ ಹತ್ತಿ ಕೈಗಾರಿಕೆಯ ಪ್ರಸ್ತುತ ಸ್ಥಿತಿ ಮತ್ತು ಸಮಸ್ಯೆಗಳು. ಕಾಟನ್ ಅಸೋಸಿಯಷನ್ ಆಫ್ ಇಂಡಿಯಾ, ನಂ.51,
- ಶಾಂನಾದ ಬಸಿರ್. (ಅಕ್ಟೋಬರ್ 04, 2016). ದಿ ಬೆಟೆಲ್ ಓವರ್ ಬಿಟಿ ಕಾಟನ್. ದಿ ಹಿಂದೂ, ಬೆಂಗಳೂರು.
- ವಿಶೇಷ ಪ್ರತಿನಿಧಿ. (ಮೇ 15, 2020). ಹತ್ತಿ ಬೆಳೆಗಾರರ ಗೋಳು ಕೇಳೊರಿಲ್ಲ, ಬೆಂಬಲ ಬೆಲೆ ಖರೀದಿ ಕೇಂದ್ರಕ್ಕೆ ಬಂದ ಹತ್ತಿ ತಿರಸ್ಕಾರ. ವಿಜಯವಾಣಿ ದಿನಪತ್ರಿಕೆ, ಬೆಂಗಳೂರು.